# ಮಾನವೀಯತೆಯ ಒಂದು ನೋಟ

## ಬೆಟ್ಟದ ಅನಕ್ಷರಸ್ಥ, ಆದರೆ ಸುಸಂಸ್ಕೃತ ದಂಪತಿಗಳು

**ಸ್ವಾಮಿ ಜಪಾನಂದ**

ಶ್ರೀಮಾತೆ ಶಾರದೇವಿಯವರ ಶಿಷ್ಯರಾಗಿದ್ದ ಸ್ವಾಮಿ ಜಪಾನಂದರು (೧೮೯೮-೧೯೭೨) ಶ್ರೀರಾಮಕೃಷ್ಣರ ಸಂನ್ಯಾಸಿ ಶಿಷ್ಯಂದಿರಲ್ಲಿ ಹಲವರ ಪ್ರೀತಿಗೆ ಪಾತ್ರರಾಗಿದ್ದವರು. ಸಂನ್ಯಾಸಕ್ಕೆ ಮುನ್ನ ಅವರು ಭಗವಂತನ ಅನ್ವೇಷಣೆಗಾಗಿ ಅವನಲ್ಲೇ ನಿರ್ಭರರಾಗಿ ಪರಿವ್ರಾಜಕ ಜೀವನ ನಡೆಸಿದ್ದರು. ಈ ಅನುಭವಗಳನ್ನು ಅವರು ತಮ್ಮ **'ಮಾನವತಾ ಕೀ ಝಾಂಕಿ'** ಎಂಬ ಪುಸ್ತಕದಲ್ಲಿ ವರ್ಣಿಸಿದ್ದಾರೆ. ಇದನ್ನು ರಾಮಕೃಷ್ಣ ಮಹಾ ಸಂಘದ ಹಿಂದೀ ಮಾಸಪತ್ರಿಕೆ 'ವಿವೇಕ ಜ್ಯೋತಿ'ಯಲ್ಲಿ ಧಾರಾವಾಹಿಯಾಗಿ ಪ್ರಕಟಿಸಲಾಗಿತ್ತು . ಈ ಕೃತಿಯ ಮೊದಲ ಅಧ್ಯಾಯ ಇಲ್ಲಿದೆ. ಇದನ್ನು ಸಂಪಾದಿಸಿ ಪ್ರಕಟಿಸಿದವರು ಆಗಿನ ಸಂಪಾದಕರಾಗಿದ್ದ ಸ್ವಾಮಿ ವಿದೇಹಾತ್ಮಾನಂಜಿಯವರು. *(– ಸಂ.)*

ಇದು ತುಂಬಾ ಹಿಂದಿನ ಕಥೆ. ಒಬ್ಬ ಸಂನ್ಯಾಸಿ ಪರ್ಯಟನೆ ಮಾಡುತ್ತಾ ಹಿಮಾಲಯ ಪರ್ವತಗಳಲ್ಲಿರುವ ತೆಹ್ರಿ-ಗಢವಾಲ್ ಕಡೆಗೆ ಹೋಗುತ್ತಿದ್ದ. ಪರ್ವತ, ಕಾಡುಗಳಲ್ಲಿ ಅಲೆದಾಡುತ್ತಾ ಅವನು ದಾರಿ ತಪ್ಪಿದ; ಯಾವುದೇ ಹಳ್ಳಿ ಕಾಣಿಸಲಿಲ್ಲ, ಜನರೂ ಕಂಡುಬರಲಿಲ್ಲ. ಅವನು ಕಾಡಿನಲ್ಲೇ ಉಳಿಯಬೇಕಾಯಿತು. ಬಟ್ಟೆಯ ಚಪ್ಪಲಿಗಳು ಹರಿದುಹೋಗಿದ್ದರಿಂದ ಅವನ್ನು ಎಸೆದು ಬಿಟ್ಟಿದ್ದ. ಕಾಲುದಾರಿಯಲ್ಲಿ, ಚೂಪಾದ ಬೆಣಚುಕಲ್ಲುಗಳ ಮೇಲೆ ಬರಿಗಾಲಿನಲ್ಲಿ ನಡೆದು, ಪಾದದ ತಳಭಾಗದ ಚರ್ಮ ಸುಟ್ಟು ಹೋಗಿ, ನೋವು ಅಸಹನೀಯವಾಗಿತ್ತು. ಹಿಂದೆಂದೂ ಆತ ಈ ರೀತಿ ಬರಿಗಾಲಿನಲ್ಲಿ ನಡೆದಿರಲಿಲ್ಲ. ಆದ್ದರಿಂದ ಅವನಿಗೆ ತುಂಬಾ ತೊಂದರೆಯಾಯಿತು. ಸಂಜೆಯ ಹೊತ್ತಿಗೆ ಎರಡೂ ಪಾದಗಳಲ್ಲಿ ಗುಳ್ಳೆಗದ್ದು ಸೈಕಲ್‌ನ ರಬ್ಬರ್ ಟ್ಯೂಬ್‌ನಂತೆ ಊದಿಕೊಂಡವು. ಈಗ ಏನು ಮಾಡಲಿ? ಟವೆಲನ್ನು ಹರಿದುಕೊಂಡು, ತನ್ನ ಎರಡೂ ಕಾಲುಗಳಿಗೆ ಕಟ್ಟಿಕೊಂಡು ತಣ್ಣೀರಲ್ಲಿ ಅದ್ದಿ, ಕುಷ್ಠ ರೋಗಿಯಂತೆ ಕಷ್ಟಪಟ್ಟು ನಡೆಯತೊಡಗಿದ. ಆದರೆ ಊರಿನಲ್ಲಿ ಯಾರೂ ಕಾಣಸಿಗಲಿಲ್ಲ. ಅರಣ್ಯ ಇಲಾಖೆಯವರ ಅರ್ಧಭಾಗ ವಷ್ಟೇ ನಿರ್ಮಾಣಗೊಂಡಿದ್ದ ಸಣ್ಣ ಕೋಣೆಯಲ್ಲಿ ರಾತ್ರಿ ಉಳಿದು ಕೊಂಡ. ಸುತ್ತಲೂ ದಟ್ಟವಾದ ಕಾಡು; ಪಕ್ಕದಲ್ಲಿ ಒಂದು ಸಣ್ಣ ಪರ್ವತದಿಂದಿಳಿದು ಬರುತ್ತಿದ್ದ ಸ್ವಚ್ಛ ನೀರಿನ ನದಿ ಹರಿಯುತ್ತಿತ್ತು. ಆ ದೃಶ್ಯ ತುಂಬಾ ರಮಣೀಯವಾಗಿತ್ತು. ಆದರೆ ಆಹಾರವಿಲ್ಲದೆ ಹಸಿವಿನಿಂದ ಹೊಟ್ಟೆಯಲ್ಲಿ ಹಳದೀಘಾಟಿ * ಯುದ್ಧ ನಡೆಯು ತ್ತಿತ್ತು, ಹಾಗೂ ಕಾಲುಗಳಲ್ಲಿ ಅಸಹನೀಯ ಉರಿ ಕಾಣಿಸಿಕೊಂಡಿತ್ತು. ಆದ್ದರಿಂದ, ಸೌಂದರ್ಯ ಪ್ರಜ್ಞೆಯನ್ನು ಹೊಂದಿದ್ದರೂ, ನೋವಿನ ತೀವ್ರತೆಯಿಂದಾಗಿ ಅವನಿಗೆ ಅದನ್ನು ಆನಂದಿಸಲು ಸಾಧ್ಯವಾಗ ಲಿಲ್ಲ.

ಅವನು ರಾತ್ರಿಹೊತ್ತು ಬೆಂಕಿ ಉರಿಸಿ, ತನ್ನ ಕಾಲುಗಳನ್ನು ಬೆಚ್ಚಗೆ ಮಾಡಿಕೊಂಡ. ಇದು ಬಹುಶಃ ಊತವನ್ನು ಕಡಿಮೆ ಮಾಡೀತು ಎಂದುಕೊಂಡಿದ್ದ, ಆದರೆ ಅದರಿಂದ ಏನೂ ಆಗ ಲಿಲ್ಲ. ಇನ್ನೊಂದೆಡೆ ಹಸಿವು ನೀಗಿಸಿಕೊಳ್ಳಲು ಮಂಜುಗಡ್ಡೆ ನೀರನ್ನು ಹೆಚ್ಚಾಗಿ ಕುಡಿದದ್ದರಿಂದ ಹೊಟ್ಟೆ ನೋಯತೊಡಗಿತು. ರಾತ್ರಿಯೆಲ್ಲ ಹೀಗೆಯೇ ಕಳೆಯಿತು. ಬೆಳಿಗ್ಗೆ ಅಸಹಾಯಕ ಭಾವನೆಯಿಂದ ಅವನು ಮತ್ತೆ ತನ್ನ ಬಟ್ಟೆಗಳನ್ನು ಒದ್ದೆ ಮಾಡಿ, ಕಾಲುಗಳಿಗೆ ಪಟ್ಟಿಗಳನ್ನು ಕಟ್ಟಿ, ನದಿಯ ದಂಡೆಯ ಉದ್ದಕ್ಕೂ ಬೆಣಚುಕಲ್ಲುಗಳಿಂದ ತುಂಬಿದ ಹಾದಿಯಲ್ಲಿ ಕಷ್ಟದಿಂದ ಕುಂಟುತ್ತಾ ನಡೆಯಲು ಆರಂಭಿಸಿದ. ಮಧ್ಯಾಹ್ನದ ಸುಮಾರಿಗೆ ಪರ್ವತದ ಸೆರಗಿನಲ್ಲೊಂದು ಗುಡಿಸಲು ಕಾಣಿಸಿತು. ಮೂರು-ನಾಲ್ಕು ಸ್ತ್ರೀ-ಪುರುಷರು, ಮತ್ತು ೯-೧೦ ವರ್ಷದ ಹುಡುಗ ಇದ್ದರು. ಎತ್ತುಗಳನ್ನು ಓಡಿಸಿ ಭತ್ತ ಒಕ್ಕಣೆ ಮಾಡುತ್ತಿದ್ದರು. ಅವರು ಸಂನ್ಯಾಸಿ ಯನ್ನು ಬಹಳ ಪ್ರೀತಿಯಿಂದ ಸ್ವಾಗತಿಸಿ, ಕುಳಿತುಕೊಳ್ಳಲು ಹೇಳಿ ದರು. ನಮಸ್ಕರಿಸಿದ ನಂತರ ಕೇಳಿದರು, ''ನೀವು ರಾತ್ರಿ ಇಲ್ಲಿ ಎಲ್ಲಿ ಉಳಿದುಕೊಂಡಿದ್ದಿರಿ? ಇದು ಸಾಮಾನ್ಯ ಮಾರ್ಗವಲ್ಲ. ಎಲ್ಲಿಂದ ಈ ಕಾಡಿಗೆ ಬಂದಿರಿ? ನೀವು ನಿನ್ನೆ ಎಲ್ಲಿ ತಂಗಿದ್ದಿರಿ? '' ಸಂನ್ಯಾಸಿ ಎಲ್ಲಾ ವಿಷಯಗಳನ್ನು ಹೇಳಿದಾಗ, ಅವರು ತುಂಬಾ ದುಃಖಿತರಾಗಿ, ವಿನಯದಿಂದ ಹೇಳಿದರು: '' ನೀವು ಇಲ್ಲಿಯೇ ಇರಿ. ರೊಟ್ಟಿ ತಿಂದು ಹೋಗಿ. ನಮ್ಮ ಹಳ್ಳಿ ದೂರವಿಲ್ಲ!'' ಸಂನ್ಯಾಸಿ, 'ಎಷ್ಟು ದೂರ?' ಎಂದು ಕೇಳಿದಾಗ, ಎತ್ತರದ ಪರ್ವತದ ಕಡೆಗೆ ತೋರಿಸಿ, ''ಒಂದೂವರೆ ಮೈಲಿ ಆಗುತ್ತದೆ'' ಎಂದ. ''ಇದು ತೆಹ್ರಿಗೆ ಹೋಗುವ ದಾರಿಯಲ್ಲಿದೆಯೇ, ಇಲ್ಲವೆ?'' ಎಂದು ಕೇಳಿ ದಾಗ, ''ಇಲ್ಲ, ಇದು ದೂರದಲ್ಲಿದೆ'' ಎಂದರು. ಹುಡುಗನಿಗೆ, ''ನೀನು ಬೇಗ ಹೋಗಿ ಮನೆಯಿಂದ ಗೋಧಿಹಿಟ್ಟು ತೆಗೆದು ಕೊಂಡು ಬಾ'' ಎಂದರು. ಹುಡುಗ ಒಂದೂವರೆ ಮೈಲಿ ಕಡಿ ದಾದ ಬೆಟ್ಟವನ್ನು ಹತ್ತಿ ಊರಿಗೆ ಹೋಗಿ, ಗೋಧಿಹಿಟ್ಟು ತರ ಬೇಕಿತ್ತು, ಬಳಿಕ ಅಡುಗೆ ಮಾಡಿ ಸಂನ್ಯಾಸಿಗೆ ಭಿಕ್ಷೆ ನೀಡಬೇಕಿತ್ತು! ಆಗಲೇ ಮಧ್ಯಾಹ್ನವಾಗಿತ್ತು. ಹುಡುಗನಿಗೆ ಸಂಜೆಯ ಒಳಗೆ ಅದನ್ನು ತರುವುದು ಸಾಧ್ಯವಿರಬಹುದು, ಆದರೆ ಸಂನ್ಯಾಸಿಗೆ ಅಲ್ಲಿಯತನಕ ಅಲ್ಲಿ ಇರುವುದು ಸಾಧ್ಯವಿರಲಿಲ್ಲ. ಸೌಜನ್ಯಕ್ಕೆ ಬಹಳ ಸಂತೋಷವನ್ನು ವ್ಯಕ್ತಪಡಿಸಿ, ಅವರಿಗೆ ಆಶೀರ್ವಾದ ಮಾಡಿ, ತೆಹ್ರಿಗೆ ಹೋಗುವ ದಾರಿಯಲ್ಲಿ ಮುಂದಿನ ಹಳ್ಳಿ ಎಷ್ಟು ದೂರವೆಂದು ಕೇಳಿ ಅವನು ಅಲ್ಲಿಂದ ಹೊರಟ. ಆ ಬೆಟ್ಟದ ಸಜ್ಜನರು ಅವನಿಗೆ ಅಲ್ಲಿರಲು ಬಹಳ ಒತ್ತಾಯಿಸಿದರು. ಆದರೆ ಆ ಸಂದರ್ಭದಲ್ಲಿ ಸಂನ್ಯಾಸಿಗೆ ಹಾಗೆ ಮಾಡಲು ಸಾಧ್ಯವಾಗಲಿಲ್ಲ.

* ೧೫೭೬ರಲ್ಲಿ ರಾಣಾ ಪ್ರತಾಪ ಸಿಂಹ ನಿಗೂ ಮೊಗಲರ ಸೇನೆಗೂ ರಾಜ ಸ್ಥಾನದ ಹಳದೀಘಾಟಿ ಎಂಬಲ್ಲಿ ಭೀಕರ ಯುದ್ಧ ನಡೆದಿತ್ತು.

ಪಹಾಡಿ ದಾರಿ ತೋರಿಸಿ ಹೇಳಿದ, ''ಊರು ಬಹಳ ದೂರ ವಿಲ್ಲ, ಹತ್ತಿರದಲ್ಲಿದೆ. ನದಿಯ ದಡವನ್ನು ದಾಟಿ ಬೆಟ್ಟದ ಮೇಲೆ ಹೋಗುವ ಮುನ್ನ ಕಮಂಡಲುವಿನಲ್ಲಿ ನೀರು ತುಂಬಿಸಿಕೊಳ್ಳಿ. ಏಕೆಂದರೆ, ಮುಂದೆ ನೀರು ಸಿಗಲಾರದು.''

ಸಂನ್ಯಾಸಿಯೂ ಹಾಗೆಯೇ ಮಾಡಿದ. ಆದರೆ ಆ ದಾರಿ ಬಹಳ ಕಡಿದಾಗಿತ್ತು; ಹಳ್ಳಿಯೂ ಸಾಕಷ್ಟು ದೂರದಲ್ಲಿತ್ತು. ಮೊದಲ ದಿನದಿಂದಲೂ ಆಹಾರವಿಲ್ಲದೆ ಹಸಿದಿದ್ದರಿಂದ ಮತ್ತು ಕೇವಲ ಮಂಜುಗಡ್ಡೆಯ ನೀರನ್ನು ಕುಡಿದು ಹೊಟ್ಟೆ ತುಂಬಿದ್ದರಿಂದ ಆತ ತುಂಬಾ ದುರ್ಬಲನಾಗಿದ್ದ. ನಂತರ ಮಧ್ಯಾಹ್ನದ ಬಿಸಿಲಿನ ಬೇಗೆ, ಕಡಿದಾದ ಇಳಿಜಾರು ದಾರಿ ಅವನನ್ನು ಸಂಪೂರ್ಣವಾಗಿ ಕಂಗೆಡಿಸಿಬಿಟ್ಟಿತ್ತು. ಆದರೆ ಬೇರೇನು ದಾರಿ? ನೀರು ಕುಡಿಯುತ್ತ ಕಮಂಡಲುವಿನ ನೀರೂ ಖಾಲಿಯಾಯಿತು. ಈಗ ಬಾಯಾರಿಕೆ ಯಿಂದ ಗಂಟಲು ಒಣಗತೊಡಗಿತು, ನಾಲಿಗೆ ಒಳಕ್ಕೆ ಎಳೆಯಲಾ ರಂಭಿಸಿತು. ನಡೆಯಲು ಕಷ್ಟವಾಗುತ್ತಿತ್ತು; ಕಾಲುಗಳಲ್ಲಿ ತುಂಬಾ ನೋವು. ಆದರೆ ಪರಿಹಾರವೇನು? ಅವನ ಮನಸ್ಸಿನಲ್ಲಿ ಆಲೋ ಚನೆಯೆದ್ದಿತು – ಎಲ್ಲಾದರೂ ಸ್ವಲ್ಪ ನೀರು ಸಿಕ್ಕಿದರೆ! ಬೇರೆ ಏನೂ ಅಗತ್ಯವಿಲ್ಲ! ಆದರೆ ಎಲ್ಲೂ ನೀರು ಕಾಣಿಸಲಿಲ್ಲ. ಬಹಳ ಕಷ್ಟ ಪಟ್ಟು ಬೆಟ್ಟದ ತುದಿಯನ್ನು ಸೇರಿದಾಗ ಅಲ್ಲಿ ೮–೧೦ ಮನೆ ಗಳಿರುವ ಪುಟ್ಟ ಗ್ರಾಮ ಕಣ್ಣಿಗೆ ಬಿತ್ತು. ಆದರೂ ಆ ಹಳ್ಳಿಯಲ್ಲಿ ಜನರೇ ಇರಲಿಲ್ಲ. ಅವನು ಇಡೀ ಹಳ್ಳಿಯನ್ನು ಸುತ್ತಾಡಿದ, ಆದರೆ ಎಲ್ಲಿಯೂ ನೀರು ಸಿಗಲಿಲ್ಲ. ಏನನ್ನಾದರೂ ಕೇಳೋಣ ಎಂದರೆ ಯಾವ ಮನುಷ್ಯನೂ ಕಣ್ಣಿಗೆ ಬೀಳಲಿಲ್ಲ. ಈಗ ಅವನಿಗೆ ತಲೆಸುತ್ತಲಾರಂಭಿಸಿತು; ತಾನು ಸಾಯುತ್ತೇನೆ ಎಂಬುದಾಗಿ ಅನ್ನಿಸತೊಡಗಿತು.

ನಿರಾಶೆಗೊಂಡ ಅವನು ಆ ಹಳ್ಳಿಯ ಹೊರಗೆ ಒಂದು ದೊಡ್ಡ ಆಲದ ಮರದ ಕೆಳಗೆ ಕಂಬಳಿ ಹಾಸಿ, ಅಲ್ಲಿ ಕೊನೆಯುಸಿರೆಳೆ ಯಲು ಮಲಗಿಕೊಂಡ. ಕುಳಿತುಕೊಳ್ಳಲು ಶಕ್ತಿಯೇ ಇರಲಿಲ್ಲ. ಹಿಮಾಲಯದ ಒಂದು ನಿರ್ಜನ ಪ್ರದೇಶಲ್ಲಿ ಕೊನೆಯ ಕ್ಷಣಕ್ಕಾಗಿ ಕಾಯುತ್ತಿದ್ದಾಗ, ಆ ಸಂನ್ಯಾಸಿ ಇದು ಪರಮೇಶ್ವರನ ಇಚ್ಛೆಯಿರ ಬೇಕು ಎಂದು ಮನಸ್ಸಿನಲ್ಲಿ ಭಾವಿಸಿದ. ತನ್ನ ಇಷ್ಟದೇವತೆಯನ್ನು ಮನಸ್ಸಿನಲ್ಲಿ ನೆನಪಿಸಿಕೊಳ್ಳುತ್ತಾ ಆತ್ಮಭಾವದಲ್ಲಿ ಸ್ಥಿರನಾಗಲು ಪ್ರಯತ್ನಿಸಿದ. ಆಗ ಸುಮಾರು ಇನ್ನೂರೈವತ್ತು – ಮುನ್ನೂರು ಗಜಗಳಷ್ಟು ದೂರದಲ್ಲಿದ್ದ ದೊಡ್ಡ ಹಳ್ಳದ ಒಳಗಿನಿಂದ ಕೆಲವರು ಪರಸ್ಪರ ಮಾತನಾಡಿಕೊಳ್ಳುತ್ತಿದ್ದ ಸದ್ದು ಕೇಳಿಸಿತು. (ಆ ಹಳ್ಳವು ಒಂದು ಮೈಲಿ ಆಳವಾಗಿತ್ತು, ಅದರ ಕೆಳಗೆ ನದಿ ಹರಿಯುತ್ತಿತ್ತು. ಮುಂಭಾಗದಲ್ಲಿ ಎತ್ತರದ ಪರ್ವತಗಳಿದ್ದವು).

ಆ ಧ್ವನಿ ಕೇಳಿದ ಕೂಡಲೇ ನೀರಿಗಾಗಿ ಕೊನೆಯ ಪ್ರಯತ್ನ ಮಾಡಬೇಕೆಂಬ ಬಲವಾದ ಆಸೆ ಸಂನ್ಯಾಸಿಗೆ ಹುಟ್ಟಿತು. ಎದ್ದು ಹಳ್ಳದ ಕಡೆ ನಡೆದ. ಆದರೆ ಅಲ್ಲಿ ನಿಂತುಕೊಂಡು ಕೆಳಗಿನ ಹಳ್ಳದ ಕಡೆ ನೋಡುವುದಕ್ಕೆ ಅವನಿಗೆ ತ್ರಾಣವಿರಲಿಲ್ಲ. ಅವನು ಅಲ್ಲೇ ಮಲಗಿಬಿಟ್ಟ. ಎಂಟುನೂರು–ಒಂಬೈನೂರು ಗಜಗಳಷ್ಟು ಕೆಳಗೆ ಹಳ್ಳವನ್ನು ನೋಡಿದ. ಅಲ್ಲಿ ಒಂದು ಸಣ್ಣ ಗುಡ್ಡಗಾಡಿನ ಮನೆ ಯಿತ್ತು; ಅಲ್ಲಿ ಅನೇಕ ಜನ ಕುಳಿತುಕೊಂಡು ರೊಟ್ಟಿ ಬೇಯಿ ಸುತ್ತಾ ಮಾತನಾಡುತ್ತಿದ್ದರು. ಬಾಯಾರಿಕೆಯಿಂದ ಅವನ ಗಂಟಲು ಬಿಗಿದುಕೊಂಡಿತ್ತು. ಆದ್ದರಿಂದ ಬಟ್ಟೆಯನ್ನು ಬೀಸುತ್ತಾ ಆ ಜನರ ಗಮನ ಸೆಳೆಯಲು ಯತ್ನಿಸಿದ. ಕೊನೆಗೂ ಅವನು ಅದರಲ್ಲಿ ಯಶಸ್ವಿಯಾದ. ಚಿಕ್ಕ ಮಕ್ಕಳು ಅಂತಹ ವಿಷಯಗಳನ್ನು ಬೇಗನೆ ಗಮನಿಸುತ್ತಾರೆ. ಇಲ್ಲೂ ಅದೇ ರೀತಿ ಆಯಿತು – ಅವ ನನ್ನು ನೋಡಿದ ಮಕ್ಕಳು ಬೆರಳುಮಾಡಿ ಎಲ್ಲರಿಗೂ ತೋರಿಸ ತೊಡಗಿದರು. ಅವರು ಅವನನ್ನು ಅಲ್ಲಿಗೆ ಕರೆಯತೊಡಗಿದರು. ಸಂನ್ಯಾಸಿ ಕಮಂಡಲುವನ್ನು ತೋರಿಸಿ ನೀರಿಗಾಗಿ ಸನ್ನೆ ಮಾಡಿದ. ಕೆಳಗಿದ್ದವನು ಹಂಡೆಯನ್ನೆತ್ತಿ ತೋರಿಸಿ, ನೀರಿದೆ ಎಂದು ಕೈಯೆತ್ತಿ ಕರೆಯತೊಡಗಿದ. ಅಲ್ಲಿಗೆ ಬರಲು ಇವನಿಗೆ ಶಕ್ತಿಯಿಲ್ಲ ಎಂದು ಅವರಿಗೆ ಹೇಗೆ ತಿಳಿಸಿಕೊಡುವುದು?

ಈ ನಡುವೆ ಒಬ್ಬಳು ಪರ್ವತ ದೇವತೆ ಹೊರಬಂದು ಒಬ್ಬ ವ್ಯಕ್ತಿಯನ್ನು ಸಂನ್ಯಾಸಿಯ ಬಳಿಗೆ ಹೋಗುವಂತೆ ಹೇಳಿದಳು. ಕಲ್ಲು ಮತ್ತು ಪೊದೆಗಳ ಬೇರುಗಳನ್ನು ಹಿಡಿದುಕೊಂಡು, ಅವರು ಮೇಲೆ ಹತ್ತಿ ಬಂದು, ಅವರ ಮನೆಗೆ ಇಳಿದುಹೋಗಲು ಬಹಳ ವಿನಯಪೂರ್ವಕವಾಗಿ ಕೇಳಿಕೊಂಡರು. ಅವನೇ ಆ ಮನೆಯ ಯಜಮಾನ; ಹಿಂದೆ ಹೇಳಿದ ದೇವಿಯು ಯಜಮಾನಿಯಾಗಿ ದ್ದಳು. ''ಇಂದು ಗೃಹಪ್ರವೇಶದ ಶುಭಮುಹೂರ್ತದಲ್ಲಿ ಐವರು ಬ್ರಾಹ್ಮಣರಿಗೆ ಆತಿಥ್ಯ ನೀಡುತ್ತಿದ್ದೇವೆ. ನೀವೂ ಬನ್ನಿ, ಊಟ– ನೀರು ಎಲ್ಲ ಸಿದ್ಧವಾಗಿದೆ. ದಯವಿಟ್ಟು ಬನ್ನಿ'' ಎಂದರು.

ಸಂನ್ಯಾಸಿಯು ತನ್ನ ದೈಹಿಕ ಪರಿಸ್ಥಿತಿಯನ್ನು ತಿಳಿಸಿ, ಕೆಳಕ್ಕೆ ಇಳಿಯಲು ತನಗೆ ಸಾಧ್ಯವಿಲ್ಲ ಎಂದು ತನ್ನ ಅಸಹಾಯಕತೆ ಯನ್ನು ವಿವರಿಸಿದಾಗ ಆ ಯಜಮಾನ ಹೇಳಿದ, ''ನಾನು ನಿಮ್ಮನ್ನು ಬೆನ್ನ ಮೇಲೆ ಹೊತ್ತುಕೊಂಡು ಹೋಗುತ್ತೇನೆ, ಭಯ ಪಡುವ ಅಗತ್ಯವೇನೂ ಇಲ್ಲ. ದಾರಿಯ ಮೂಲಕ ಹೋಗಲು ಬಹಳ ಸಮಯ ತೆಗೆದುಕೊಳ್ಳುತ್ತದೆ, ಏಕೆಂದರೆ ಅದು ಇದು ಒಂದು ಹಳ್ಳಿಯಷ್ಟು (ಎರಡು ಮೈಲಿ) ದೂರವಾಗುವುದು.'' ಆದರೆ ಇದರಲ್ಲಿ ಸಾಕಷ್ಟು ಅಪಾಯವಿತ್ತು. ಅಂದು ಶುಭ ದಿನ ವಾದ್ದರಿಂದ ಅಹಿತಕರ ಘಟನೆ ನಡೆದರೆ ಅವರ ದುಃಖಕ್ಕೆ ಮಿತಿಯೇ ಇರುವುದಿಲ್ಲ.

ಕೊನೆಗೆ ಅವರು ಮತ್ತ ಮತ್ತೆ ಕೇಳಿಕೊಂಡದ್ದರಿಂದ ಸಂನ್ಯಾ ಸಿಯು 'ಜೈ ಭಗವಾನ್' ಎನ್ನುತ್ತ ಸಿದ್ಧನಾದ. ಅಲ್ಲಿನವರ ಸಹಾಯ ದಿಂದ ನಿಧಾನವಾಗಿ ಕಲ್ಲು ಹಾಗೂ ಮರಗಳ ಬೇರುಗಳನ್ನು ಹಿಡಿದುಕೊಂಡು ಸುರಕ್ಷಿತವಾಗಿ ಕೆಳಗೆ ಇಳಿದನು. ಮಕ್ಕಳು ತಮ್ಮ ತಾಯಿಯೊಂದಿಗೆ ಓಡಿಬಂದು ಅವನ ಕೈಯಿಂದ ಕಮಂಡಲು, ಪುಸ್ತಕಗಳ ಸಣ್ಣ ಚೀಲ ಮತ್ತು ಅವನ ಭುಜದಲ್ಲಿದ್ದ ಕಂಬಳಿ ಯನ್ನು ತೆಗೆದುಕೊಂಡರು. ಗಂಡ–ಹೆಂಡತಿ – ಇಬ್ಬರೂ ಅವ

ನನ್ನು ಹಿಡಿದುಕೊಂಡು, ಪ್ರೀತಿಯಿಂದ ಅವನನ್ನು ಒಂದೆಡೆ ಕುಳ್ಳಿರಿಸಲು ಒಂದು ಜಾಗಕ್ಕೆ ಕರೆದುಕೊಂಡು ಹೋದರು.

ಅವನ ಕಾಲಿಗೆ ಬಟ್ಟೆಯ ಪಟ್ಟಿ ಕಟ್ಟಿದ್ದನ್ನು ನೋಡಿ ದೇವಿ ಕೇಳಿದಳು, ''ಇಲ್ಲಿ ಯಾಕೆ ಹೀಗೆ ಕಟ್ಟಿದ್ದಾರೆ?'' ಅದನ್ನು ತೆರೆದು ತೋರಿಸಿದಾಗ ಥಟ್ಟನೆ ಎರಡೂ ಕಾಲಿನ ಕೆಳಗೆ ರಬ್ಬರ್ ಬ್ಲಾಡರ್ ನಂತಹ ಗುಳ್ಳೆಗಳನ್ನು ಕಂಡು ಬೆಚ್ಚಿ ಬಿದ್ದವಳು, ''ಏನಪ್ಪಾ ಇದು? ಅಯ್ಯೋ, ತುಂಬಾ ತೊಂದರೆ ಆಗಿರಬೇಕು! ಬೂಟು ಹಾಕ ಬೇಡವೇ ನೀವು ? ಪರ್ವತಗಳಲ್ಲಿ ಬೆಣಚುಕಲ್ಲುಗಳ ಮೇಲೆ ನಡೆಯುವ ಅಭ್ಯಾಸವಿಲ್ಲ, ಆದ್ದರಿಂದ ಅಂತಹ ಗುಳ್ಳೆಗಳೆದ್ದಿವೆ. ಬನ್ನಿ, ನಾನು ಅದನ್ನು ಬೆಚ್ಚಗಿನ ನೀರಿನಿಂದ ತೊಳೆದು, ಬಿಸಿಯಾದ ಎಣ್ಣೆ ಹಚ್ಚಿಕೊಡುತ್ತೇನೆ, ಇದರಿಂದ ಸ್ವಲ್ಪ ಸಮಾಧಾನವಾಗುತ್ತದೆ'' ಎಂದಳು.

ಹೀಗೆ ಹೇಳುತ್ತಾ ಆಕೆ ಬಿಸಿನೀರು ಮತ್ತು ಎಣ್ಣೆಯನ್ನು ತರಲು ಮನೆಯೊಳಕ್ಕೆ ಹೋದಳು. ಬೇಗನೆ ಅವನ್ನು ತಂದು, ನಿಧಾನವಾಗಿ ಬಿಸಿನೀರಿನಿಂದ ಮಸಾಜ್ ಮಾಡಲು ಪ್ರಾರಂಭಿಸಿದಳು. ನಂತರ ನಿಧಾನವಾಗಿ ತನ್ನ ಮೃದುವಾದ ಕೈಗಳಿಂದ ಮೆತ್ತಗೆ ಮಾಲಿಶ್ ಮಾಡಲಾರಂಭಿಸಿದಳು.

ಅತ್ತ ಸಂನ್ಯಾಸಿ ತಣ್ಣೀರು ಕುಡಿದು ಸ್ವಲ್ಪ ಸುಧಾರಿಸಿಕೊಂಡಿದ್ದ. ಅಂತಹ ಅನುಪಮ ಪ್ರೀತಿಯ ಉಪಚಾರವನ್ನು ಪಡೆದ ನಂತರ ಅವನ ಕಣ್ಣುಗಳಿಂದ ನೀರು ಹರಿಯುತ್ತಿತ್ತು. ಅರೆಬೆತ್ತಲೆಯಾದ, ಮತ್ತು ಮೇಲ್ನೋಟಕ್ಕೆ ಸಂಸ್ಕೃತಿಯಿಲ್ಲದವರಂತೆ ಕಾಣುವ ಪರ್ವತದ ಈ ಸೋದರ, ಸೋದರಿಯರಲ್ಲಿ ಅದೆಂಥ ಪ್ರೀತಿ! ಎಷ್ಟೊಂದು ಸೌಜನ್ಯ! ನೂರಾರು ವರ್ಷಗಳಿಂದ ಸಾಕ್ಷರತೆಯಿಂದ ವಂಚಿತರಾಗಿದ್ದರೂ, ನಾಗರಿಕ ಸಮಾಜದಿಂದ ದೂರ ಬದುಕುತ್ತಿದ್ದರೂ, ಆರ್ಯ ಋಷಿಗಳು ತೋರಿಸಿಕೊಟ್ಟ ನೈತಿಕ ಮೌಲ್ಯಗಳನ್ನು ಈ ಜನರು ಮರೆತಿಲ್ಲ. ಧನ್ಯ ಭಾರತ ಮಾತೆ ! ಧನ್ಯ ಋಷಿಗಳ ಸಂತತಿ!

ಅವನ ಕಣ್ಣುಗಳಲ್ಲಿ ನೀರು ಕಂಡಾಗ, ಈತನಿಗೆ ತುಂಬಾ ನೋವಾಗಿದೆ ಎಂದು ಆ ಸಭ್ಯಳಿಗೆ ಅನ್ನಿಸಿತು. ಅವಳು ಮತ್ತೆ ಮತ್ತೆ ಹೇಳತೊಡಗಿದಳು: ''ಈಗ ನಿಮಗೆ ಸಮಾಧಾನವಾಗುತ್ತದೆ. ಆಹಾರ ಸಿದ್ಧವಾಗಿದೆ. ಶ್ರೀ ನಾರಾಯಣನಿಗೆ ನೈವೇದ್ಯ ನೀಡಿದ ತಕ್ಷಣ, ಅದನ್ನು ಮೊದಲು ನಿಮಗೇ ಬಡಿಸುತ್ತೇನೆ, ನೀವು ಊಟ ಮಾಡಿ ವಿಶ್ರಾಂತಿ ಪಡೆಯಿರಿಯ... ಇದು ಪರಮೇಶ್ವರನ ದೊಡ್ಡ ಕೃಪೆ. ಹೊಸ ಮನೆಯನ್ನು ಪ್ರವೇಶಿಸುವ ಸಮಯದಲ್ಲಿ, ಐದು ಬ್ರಾಹ್ಮಣರೊಂದಿಗೆ ಒಬ್ಬ ಸಂನ್ಯಾಸಿ ಕೂಡ ಬಂದು ಊಟ ಮಾಡಿದರೆ, ಆಗ ಮಹಾ ಸಂತೋಷವಾಗುತ್ತದೆ ಎಂದು ನಾನು ಬಹಳ ದಿನಗಳಿಂದ ಹೇಳುತ್ತಿದ್ದೆ. ಈಗ ನೀವು ಬಂದಿದ್ದೀರಿ. ಇಂತಹ ಸಾಮಾನ್ಯ ಸಂದರ್ಭದಲ್ಲಿ ಇಲ್ಲಿಗೆ ಸಂನ್ಯಾಸಿ ಬರಲಾರರು ಎಂದು ಅವರು (ಪತಿದೇವ) ಹೇಳಿದ್ದರು. ಆದರೆ ದೇವರು ನನ್ನ ಪ್ರಾರ್ಥನೆಯನ್ನು ಕೇಳಿದ್ದಾನೆ, ಹಾಗೂ ನೀವು ಬಂದಿರಿ ... ಇದು ನಿಜವೇ ಅಲ್ಲವೆ?'' ಎನ್ನುತ್ತಾ, ಆಕೆ ತನ್ನ ಗಂಡನನ್ನು ನೋಡಿ ನಕ್ಕಳು – ''ನೀವು ನಮಗಾಗಿಯೇ ಇಲ್ಲಿಗೆ ಬಂದಿದ್ದೀರಿ. ಇಲ್ಲದಿದ್ದರೆ ತೆಹ್ರಿ ಕಡೆಗೆ ಹೋಗಲು ಇಂಥ ಕಾಡುದಾರಿಯಾಗಿ ಯಾರೂ ಹಾದುಹೋಗುವುದಿಲ್ಲ.''

ಸಂನ್ಯಾಸಿ ದಿಗ್ಭ್ರಮೆಯಿಂದ ಕೇಳುತ್ತಿದ್ದ. ಅವನು ಮನಸ್ಸಿನಲ್ಲಿ ಯೋಚಿಸುತ್ತಿದ್ದ – 'ನಾನು ನಿನಗಾಗಿ ಬರಬೇಕಿತ್ತೇ ಅಥವಾ ನೀವೆಲ್ಲರೂ ನನಗಾಗಿ ಬಂದಿದ್ದೀರಾ? ನಿಮ್ಮ ಅಂತರಂಗದ ಪ್ರಾರ್ಥನೆಯಿಂದಾಗಿ ನಾನು ದೈವೀ ಮಾರ್ಗದರ್ಶನದಂತೆ ದಾರಿ ತಪ್ಪಿ ಅಲೆದಾಡುತ್ತಿದ್ದೇನೆ; ಸರಿಯಾದ ಸಮಯಕ್ಕೆ ಇಲ್ಲಿಗೆ ಬಂದೆ ಎಂದು ತೋರುತ್ತದೆ, ಅಲ್ಲವೆ? ಸರಿ, ಇಂದು ನನ್ನ ಜೀವನದ ಕೊನೆಯ ಕ್ಷಣದಲ್ಲಿ ಸಾವು ನನ್ನ ಕಣ್ಣ ಮುಂದೆ ಕಾಣಿಸಿಕೊಂಡಾಗ, ಈ ಸ್ಥಳದಲ್ಲಿ ನಿಮ್ಮ ಇರುವಿಕೆ ಮತ್ತು ಆದರ, ಸತ್ಕಾರಗಳು ಸಂಜೀವಿನಿಯಂತೆ ಕೆಲಸ ಮಾಡಿದವು. ಅದರಿಂದ ನನ್ನ ಜೀವವನ್ನು ಉಳಿಯಿತು; ಮುಂದೆ ಎಲ್ಲವೂ ದೇವರ ಇಚ್ಛೆಯಂತೆ !'

ಈ ಇಡೀ ಘಟನೆಯಲ್ಲಿ ಮಾನವೀಯತೆಯ ಒಂದು ಉತ್ತಮ ದೃಷ್ಟಾಂತವಿದೆ.

''ಈ ಹಳ್ಳಿಯಲ್ಲಿ ಯಾಕೆ ಯಾರೂ ವಾಸಿಸುವುದಿಲ್ಲ?'' ಎಂದು ಸಂನ್ಯಾಸಿ ಕೇಳಿದಾಗ, ಇದು 'ಮಳೆಗಾಲದ ಹಳ್ಳಿ' ಎಂದು ತಿಳಿದುಬಂತು. ಅಂದರೆ, ನೀರಿನ ಅಭಾವದಿಂದ ಜನರು ಮಳೆಗಾಲದಲ್ಲಿ ಮಾತ್ರ ಇಲ್ಲಿಗೆ ಬಂದು ನೆಲೆಸುತ್ತಾರೆ, ಹೊಲಗಳಲ್ಲಿ ಕೆಲಸ ಮಾಡುತ್ತಾರೆ. ಕೆಳಗಡೆ ಒಂದು ಮೈಲಿ ದೂರದ ನದಿಯಲ್ಲಿ ನೀರಿದೆ; ಮಳೆಗಾಲದಲ್ಲಿ ನೀರಿನ ಬುಗ್ಗೆಗಳು ಮತ್ತು ಕೊಳಗಳು ತುಂಬುತ್ತವೆ. ಅನಂತರ ಜನರು ಅಲ್ಲಿಗೆ ಬಂದು ನೆಲೆಸುತ್ತಾರೆ. ✶

ಶ್ರೀರಾಮಕೃಷ್ಣರು ಭಾರತೀಯ ನಾರಿಯರ ವಿಚಾರವಾಗಿ ಹೇಳಿದ ಕೊನೆಯ ಮಾತು ಶ್ರೀಮಾತೆಯವರ ಜೀವನ ಎಂದು ನನಗೆ ತೋರುವುದು. ಆದರೆ ಅವರು ಹಿಂದಿನ ಆದರ್ಶದ ಕೊನೆಯೋ ಅಥವಾ ಬರುವ ಆದರ್ಶದ ನಾಂದಿಯೋ? ಅತ್ಯಂತ ಸರಳ ಸ್ವಭಾವದ ಹೆಂಗಸರು ಕೂಡ ಪಡೆಯಬಹುದಾದಂತಹ ಮಾಧುರ್ಯ ಮತ್ತು ಪರಿಜ್ಞಾನವನ್ನು ಅವರಲ್ಲಿ ನಾವು ನೋಡುತ್ತೇವೆ. ನನಗಂತೂ ಅವರ ಚಾರಿತ್ರ್ಯದ ಪವಿತ್ರತೆಯಷ್ಟೇ ಮುಖ್ಯ ಅವರಲ್ಲಿರುವ ರಾಣಿಯ ಗಾಂಭೀರ್ಯ ಮತ್ತು ಅವರ ಮನಸ್ಸಿನ ಔದಾರ್ಯ.

— ಸೋದರಿ ನಿವೇದಿತಾ